ಅ) ಪ್ರಾರಂಭವಾಗಿರುವ ಪಾಠ ಶಾಲೆಗಳಲ್ಲಿ ಉಪಾಧ್ಯಾಯರುಗಳ ಹುದ್ದೆಗಳು ಖಾಲಿಯಾಗಿರಲಂ ಕಾರಣಗಳೇನು.

ಇ) ಸದರಿ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರದವರು ಕೈಕೊಳ್ಳುವ ಕ್ರಮಗಳೇನ್ನು ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಎಲ್ಲಾ ಖಾಲಿ ಹುದ್ದೆಗಳನ್ನು ಜಿಲ್ಲಾ ಪಟ್ಟದ ನೇಮಕಾತಿ ಸಮಿತಿಯ ಅಭ್ಯರ್ಥಿಗಳು ಹಾಗೂ ಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳ ಮೂಲಕ ಭರ್ತಿ ಮಾಡಲಾಗಿದೆ.

ಮಂಳಬಾಗಿಲಂ ತಾಲ್ಲೂಕಿನಲ್ಲಿ ಉತ್ಪಾದನೆ ಆಗುತ್ತಿರುವ ಹಾಲಿನ ಪ್ರಮಾಣ.

೭೪೭. ಶ್ರೀ ಆರ್. ವೆಂಕಟರಾಮಯ್ಯ (ಮಂಳಬಾಗಿಲು).—ಮಾನ್ಯ ಪಶುವೈದ್ಯ ಹಾಗೂ ಪಶು ಸಂಗೋಪನಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಇರುವ ಗ್ರಾಮಂಗಳ ಸಂಖ್ಯೆ ಎಷ್ಟು ಹಾಗೂ ಸದರಿ ಗ್ರಾಮಂಗಳಲ್ಲಿ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣವೆಷ್ಟು ?

ಆ) ಸಂಘಟಿತ ಗ್ರಾಮಾಭಿವೃದ್ಧಿ ಕಾರ್ಯಕ್ರಮ ಆರಂಭವಾದಾಗಿನಿಂದಲೂ ಈ ಯೋಜನೆಯಲ್ಲಿ ಹಾಲು ಉತ್ಪಾದನೆಗಾಗಿ ಆವೃತವಾದ ಗ್ರಾಮಾಂಗಳ ಸಂಖ್ಯೆ ಹಾಗೂ ತಾಲ್ಲೂಕಿನಲ್ಲಿರುವ ಹಾಲು ಸಹಕಾರ ಸಂಘಗಳ ಸಂಖ್ಯೆ ಎಷ್ಟು ? ಸದರಿ ಸಂಘಗಳಿಗೆ ರೂಪಿಸಿರುವ ಸಂಗ್ರಹಣಾ ಮಾರ್ಗಗಳ ಸಂಖ್ಯೆ ಎಷ್ಟು ?

ಇ) ಕರ್ನಾಟಕ ಹೈನು ಉದ್ಯಮ ನಿಗಮವು ಕೂಡಲೇ ಇನ್ನೂ ಮೂರು ಮಾರ್ಗಗಳನ್ನು ಮಂಳಬಾಗಿಲು ತಾಲ್ಲೂಕಿನಲ್ಲಿ ರೂಪಿಸಲು ಸರ್ಕಾರ ಆದೇಶ ನೀಡುವುದೇ ?

ಶ್ರೀ ಸಿದ್ಧರಾಮಯ್ಯ (ಪಶು ವೈದ್ಯ ಹಾಗೂ ಪಶು ಸಂಗೋಪನಾ ಮಂತ್ರಿಗಳು). —

ಅ) ಮುಳಬಾಗಿಲು ತಾಲ್ಲೂಕಿನಲ್ಲಿರುವ ಗ್ರಾಮಗಳ ಸಂಖ್ಯೆ ೨೮೮, ಹಾಗೂ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣ ದಿನ ಒಂದಕ್ಕೆ ಅಂದಾಜು ೧೨,೦೦೦ ರಿಂದ ೧೩,೦೦೦ ಲೀಟರ್‌ಗಳು.

ಆ) ಸಂಘಟಿತ ಗ್ರಾಮಾಭಿವೃದ್ಧಿ ಕಾರ್ಯಕ್ರಮ ಆರಂಭವಾದಾಗಿನಿಂದಲೂ ಈ ತಾಲ್ಲೂಕಿನಲ್ಲಿ ಈ ಯೋಜನೆಯಡಿಯಲ್ಲಿ ಹಾಲು ಉತ್ಪಾದನೆಗಾಗಿ ಆವೃತವಾದ ಗ್ರಾಮಗಳ ಸಂಖ್ಯೆ ೫೬. ತಾಲ್ಲೂಕಿನಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಂಖ್ಯೆ. ೮. ಸದರಿ ಸಂಘಗಳಿಗೆ ರೂಪಿಸಿರುವ ಸಂಗ್ರಹಣ ಮಾರ್ಗಗಳ ಸಂಖ್ಯೆ . ೧.

ಇ) ಇನ್ನೂ ಎರಡು ಮಾರ್ಗಗಳನ್ನು ರಚಿಸಲು ಬೆಂಗಳೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತವು ಕ್ರಮ ಕೈಗೊಂಡಿದೆ.

ಬೀರೂರಿನಲ್ಲಿ ಪಶುವೈದ್ಯ ಶಾಲೆಗೆ ಮಂಜೂರಾತಿ ನೀಡುವುದು

೭೨೪೧. ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು) ಮಾನ್ಯ ಪಶು ವೈದ್ಯ ಹಾಗೂ ಪಶು ಸಂಗೋಪನಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಬೀರೂರು ಚುನಾವಣಾ ಕ್ಷೇತ್ರದಲ್ಲಿ ಮಂಜೂರಾದ ಪಶು ವೈದ್ಯಶಾಲೆಗಳ ಸಂಖ್ಯೆ ಎಷ್ಟು?

ಆ) ಸದರಿ ಪಶುವೈದ್ಯಶಾಲೆಗೆ ಸಾಕಷ್ಟು ವೈದ್ಯಾಧಿಕಾರಿ ಹಾಗೂ ಸಿಬ್ಬಂದಿವರ್ಗದವರನ್ನು ನೇಮಿಸಲಾಗಿದೆಯೇ?

ಇ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಸದರಿ ಆಸ್ಪತ್ರೆಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಂ ಸರ್ಕಾರದವರು ಉದ್ದೇಶಿಸಿದ್ದಾರೆಯೇ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು?